ದಿನಾಂಕಃ 03-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 27.04.2024 ರಂದು ನಾನು ಮತ್ತು ಚಾಸಾ-3 ಮಾನೆ ಹತ್ತಿರ ಇದ್ದಾಗ ಸಂಜೆ 5.30 ಗಂಟೆಗೆ ಆರೋಪಿ ಏಕಾ ಏಕಿ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು , ಜಮೀನಿನ ಭಾಗದ ವಿಚಾರವಾಗಿ ಡ್ರಾಗರಿಂದ ನನ್ನ ತಲೆಗೆ ಚುಚ್ಚಿ ರಕ್ತಗಾಯಪಡಿಸಿ ನನ್ನನ್ನು ಕೆಳಕ್ಕೆ ಕೆಡವಿಕೊಂಡು ಮಚ್ಚಿನಿಂದ ಬಲಗೈಗೆ , ಎಡಮೊಣಕಾಲಿಗೆ ಹೊಡೆಯಲು ಪ್ರಯತ್ನಿಸಿದ , ಆಗ ನನ್ನ ಸೊಸೆ ಮತ್ತು ಇತರರು ಬಂದು ಬಿಡಿಸಿದರು , ನಿನಗೆ ಒಂದು ದಿನ ಗತಿ ಕಾಣಿಸುತ್ತೇನೆಂದು ಜೀವ ಬೆದರಿಕೆ ಹಾಕಿ ಮಚ್ಚು ಮತ್ತು ಡ್ರಾಗರ್ ನ್ನು ಅಲ್ಲಿಯೇ ಬಿಸಾಕಿ ಹೋದ ಎಂದರೆ ಸರಿಯಲ್ಲ. ನನ್ನ ಮಗ ಮತ್ತು ಸೊಸೆ ಸೇರಿ ನನನನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ದಿ. 25.05.2024 ರಂದು ಪೊಲೀಸರ ಮುಂದೆ ವಿವರವಾದ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-28 ಎಂದು ಗುರುತಿಸಲಾಯಿತು. ಆರೋಪಿ ನನ್ನ ತಮ್ಮನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಡಿ.ಪಿ.ಎನ್. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**